## ಅಣ್ಣಿಗೇರಿ ನಡಕಟ್ಟಿನ ವಿಶ್ವಶಾಂತಿ ಕೃಷಿ ಸಂಶೋಧನಾ ಕೇಂದ್ರದಿಂದ ನೂತನ ಕೃಷಿ ಯಂತ್ರೋಪಕರಣಗಳಿಗೆ ಚಾಲನೆ..

# ಪ್ರಾಮಾಣಿಕ ದುಡಿಮೆ ಹಣೆಬರಹ ಬದಲಿಸಬಲ್ಲದು-ನಡಕಟ್ಟಿನ

ಅಣ್ಣಿಗೇರಿ: ಸಮಾಜದಲ್ಲಿ ಶ್ರದ್ಧೆ, ಪ್ರಾಮಾಣಿಕತೆಯಿಂದ ನಡೆದುಕೊಂಡು ಬಂದರೆ ಮುಂದೊಂದು ದಿನ ಆ ವ್ಯಕ್ತಿ ಸಮಾಜಕ್ಕೆ ಒಳ್ಳೆಯ ವ್ಯಕ್ತಿಯಾಗಿ ಕಾಣಿಸುತ್ತಾನೆ ಎನ್ನುವದಕ್ಕೆ ಕೃಷಿ ವಿಜ್ಞಾನಿ ಅಬ್ದುಲ್‌ಖಾದರ ನಡಕಟ್ಟಿನ ಅವರೆ ನಿಜವಾದ ಸಾಕ್ಷಿ ಎಂದು ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಹೇಳಿದರು.

ಅವರು ಸ್ಥಳೀಯ ವಿಶ್ವಶಾಂತಿ ಕೃಷಿ ಸಂಶೋಧನಾ ಕೇಂದ್ರದಲ್ಲಿ ತಯಾರಾದ ನೂತನ ಕೃಷಿ ಯಂತ್ರೋಪಕರಣಗಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ನಡಕಟ್ಟಿನ ಅವರು ತಮ್ಮ ಪರಿಶ್ರಮದಿಂದ ರೈತರಿಗೆ ಅನುಕೂಲವಾಗುವ ರೀತಿಯಲ್ಲಿ ಸಾಕಷ್ಟು ಕೃಷಿ ಯಂತ್ರೋಪಕರಣಗಳನ್ನು ಕಂಡು ಹಿಡಿದು ರಾಷ್ಟ್ರ ಹಾಗೂ ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆಯುವ ಮೂಲಕ ಹೆಸರು ವಾಸಿಯಾಗಿದ್ದಾರೆ. ರೈತ ಕುಲಕ್ಕೆ ನಡಕಟ್ಟಿನ ಅವರ ಸೇವೆ ಅವಿಸ್ಮರಣೀಯವಾಗಿದೆ. ನೂತನವಾಗಿ ಕಂಡುಹಿಡಿದ ಕೃಷಿ ಯಂತ್ರೋಪಕರಣಗಳಿಗೆ ಬೆಂಗಳೂರಿನಲ್ಲಿ ಪ್ರದರ್ಶನ ಹಮ್ಮಿಕೊಳ್ಳುವದು ಅತ್ಯಗತ್ಯವಾಗಿದೆ. ಪ್ರದರ್ಶನದಲ್ಲಿ ರಾಜ್ಯ ಹಾಗೂ ಹೊರ ರಾಜ್ಯಗಳ ರೈತರನ್ನು ಮತ್ತು ಕೃಷಿಗೆ ಸಂಬಂಧಿಸಿದ ಅಧಿಕಾರಿಗಳನ್ನು ಆಹ್ವಾನಿಸಲು ಸರ್ಕಾರದ ಗಮನಕ್ಕೆ ತರುತ್ತೇನೆ ಎಂದು ಭರವಸೆ ನೀಡಿದರು.

ಮಾಜಿ ಸಚಿವ ಹಾಗೂ ಶಾಸಕ ಎಚ್.ಕೆ. ಪಾಟೀಲ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಬೆಳೆದು ಕೃಷಿ ಯಂತ್ರೋಪಕರಣಗಳನ್ನು ಕಂಡು ಹಿಡಿಯುವ ಮೂಲಕ ರಾಷ್ಟ್ರಾದ್ಯಂತ ಹೆಸರುವಾಸಿಯಾದ ನಡಕಟ್ಟಿನ ಸೇವೆ ಅನನ್ಯ. ದುಡ್ಡಿಲ್ಲದೆ ಸಂಶೋಧನೆ ಮಾಡಿರುವದಂತೂ ಮರೆಯಲಾರದ ಸಂಗತಿಯಾಗಿದೆ. ದೇಶದ ಒಕ್ಕಲುತನಕ್ಕೆ ಅನುಕೂಲವಾಗುವ ರೀತಿಯಲ್ಲಿ ಉಪಯೋಗಿಸಲು ಹಲವಾರು ಯಂತ್ರಗಳನ್ನು ಕಂಡು ಹಿಡಿದು ಉತ್ತರ ಕರ್ನಾಟಕ ಭಾಗದ ಆಸ್ತಿಯಾಗಿ ಬೆಳೆದಿರುವ ನಡಕಟ್ಟಿನ ಕಾರ್ಯ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ಕೃಷಿ ವಿಜ್ಞಾನಿ ಎ.ಐ. ನಡಕಟ್ಟಿನ ಮಾತನಾಡಿ, ರೈತರ ಅನುಕೂಲಕ್ಕಾಗಿ ಯಂತ್ರಗಳನ್ನು ಕಂಡು ಹಿಡಿಯಲು ಹೋಗಿ ಹತ್ತು ವರ್ಷಗಳ ಹಿಂದೆ ನನ್ನ ಎಲ್ಲ ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡಿದ್ದೇನೆ. ನಾನು ಕಂಡು ಹಿಡಿದ ಜಮೀನು ಹರಗುವ ಕುಡ ಮತ್ತು ಬಿತ್ತನೆ ಮಾಡುವ ಕೂರಿಗೆ ಈಡೀ ದೇಶಾದ್ಯಂತ ಪ್ರಖ್ಯಾತಿ ಪಡೆದು ಪಶಸ್ತಿ ಬರುವಿಕೆಗೆ ಕಾರಣವಾಗಿವೆ. ಪ್ರಶಸ್ತಿಯಿಂದ ಬಂದ 8.5 ಲಕ್ಷ ಮೊತ್ತವನ್ನು ಸಂಘ-ಸಂಸ್ಥೆಗಳಿಗೆ ಮತ್ತು ಶಿಕ್ಷಣ ಸಂಸ್ಥೆಗಳಿಗೆ ನೀಡಿದ್ದೇನೆ. ಇಂದು ನಾನು ಮುಂದು ಬರಲು ರೈತ ಕುಲವೇ ಮುಖ್ಯ ಕಾರಣ, ರೈತನೇ ರಾಷ್ಟ್ರದ ಬೆನ್ನೆಲಬು ಎಂದು ನಡಕಟ್ಟಿನ ಹೇಳಿದರು. ಡಾ. ಅಮೀನ ಹುಯಿಲಗೋಳ ದಂಪತಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು.



ಅಣ್ಣಿಗೇರಿ ನಡಕಟ್ಟಿನ ವಿಶ್ವಶಾಂತಿ ಕೃಷಿ ಸಂಶೋಧನಾ ಕೇಂದ್ರದಲ್ಲಿ ನೂತನ ಕೃಷಿ ಯಂತ್ರೋಪಕರಣಗಳಿಗೆ ಚಾಲನೆ ನೀಡಲಾಯಿತು.

ಗುರುನಾಥಗೌಡ್ರ, ಓದುಗೌಡ್ರ, ಮಾಜಿ ಶಾಸಕ ಎನ್.ಎಚ್. ಕೋನರಡ್ಡಿ, ವಿನೋದ ಅಸೂಟಿ, ಷಣ್ಮುಖ ಗುರಿಕಾರ, ಎನ್.ಎಂ. ಯಲಬುರ್ಗಿ, ಎನ್.ಟಿ. ಧಾರವಾಡ ಉಪಸ್ಥಿತರಿದ್ದರು.

## ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕಾ ಘಟಕದಿಂದ ಅಭಿನಂದನಾ ಸಮಾರಂಭ

# ಗುರುಕುಲ ಪದ್ಧತಿಯಲ್ಲಿ ಹೊಸ ಶಿಕ್ಷಣ ನೀತಿ–ನೀಲಗುಂದ

ಅಣ್ಣಿಗೇರಿ: 2021 ರ ಹೊಸ ಶಿಕ್ಷಣ ನೀತಿ ಪದ್ಧತಿ ವೇದ ಕಾಲದ ಗುರುಕುಲ ಪದ್ಧತಿಯ ಮಾದರಿ ಶಿಕ್ಷಣ ನೀತಿಯಾಗಿದೆ. ಆದರೆ ತಂತ್ರಜ್ಞಾನ ಬದಲಾದಂತೆ ಶಿಕ್ಷಣ ಪದ್ಧತಿಯೂ ಕೂಡಾ ಬದಲಾವಣೆ ಹೊಂದಿ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯೂ ಮಕ್ಕಳ ಕಲಿಕಾ ಗುಣಮಟ್ಟವನ್ನು ಹೆಚ್ಚಿಸಲು ಮತ್ತು ಜಾಗತಿಕ ತಂತ್ರಜ್ಞಾನದಲ್ಲಿ ಸ್ಪರ್ಧಿಸಲು ಇದು ಅತ್ಯವಶ್ಯಕವಾಗಿದೆ ಎಂದು ಡೀನ್, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಅಕಾಡೆಮಿ ಧಾರವಾಡದ ಡಾ. ಎಚ್.ಬಿ. ನೀಲಗುಂದ ಹೇಳಿದರು.

ಅವರು ಸ್ಥಳೀಯ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕಾ ಘಟಕದಿಂದ ಏರ್ಪಡಿಸಿದ್ದ ಹೊಸ ಶಿಕ್ಷಣ ನೀತಿ ಪದ್ಧತಿ ಕುರಿತು ಹಮ್ಮಿಕೊಂಡ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಹೊಸ ಶಿಕ್ಷಣ ನೀತಿಯೂ 5 +, 3 +, 3+ ಮತ್ತು 4 ಆಗಿರುತ್ತದೆ. 1 ರಿಂದ 5ನೇ ತರಗತಿವರಗೆ ಸ್ಥಳೀಯ ಹಾಗೂ ಮಾತೃ ಭಾಷೆಯಲ್ಲಿ ಕಡ್ಡಾಯವಾಗಿ ಓದಬೇಕು. 6ನೇ ತರಗತಿಯಿಂದ ಕಂಪ್ಯೂಟರ ಮತ್ತು ಕೌಶಲ್ಯಾಧರಿತ ಶಿಕ್ಷಣಕ್ಕೆ ಹೆಚ್ಚು ಮಹತ್ವ ಹೊಂದಿದ ಶಿಕ್ಷಣ ಪದ್ಧತಿ ಇದಾಗಿದೆ. ಬಿ.ಎ, ಬಿ.ಎಸ್ಸಿ ಮತ್ತು ಬಿ.ಕಾಂ ಎಂಬ ನಾಮಪದ ಇರುವದಿಲ್ಲ. ವಿದ್ಯಾರ್ಥಿಯೂ ತನಗೆ ಇಷ್ಟವಾದ ವಿಷಯಗಳನ್ನು ಆಯ್ಕೆ ಮಾಡುವ ಅವಕಾಶವನ್ನು ಹೊಸ ಶಿಕ್ಷಣ ಪದ್ಧತಿಯಲ್ಲಿ ಅಳವಡಿಸಲಾಗಿದೆ ಎಂದು ಡಾ. ಎಚ್.ಬಿ. ನೀಲಗುಂದ ತಿಳಿಸಿದರು.



ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕಾ ಘಟಕದಿಂದ ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಸನ್ಮಾನಿಸಿ ಗೌರವಿಸುತ್ತಿರುವದು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಸಭಾಪತಿ ಬಸವರಾಜ ಹೊರಟ್ಟಿ, ತಾವು ನಡೆದು ಬಂದ ರಾಜಕೀಯ ಜೀವನದ ಇತಿಹಾಸ ಮತ್ತು ಆರ್ಥಿಕ ಪರಿಸ್ಥಿತಿ ಕುರಿತು ಸವಿಸ್ತಾರವಾಗಿ ತಿಳಿಸಿದರು. ತಾವು ರಾಜಕೀಯ ಅಭಿವೃದ್ಧಿಗೆ ಸಹಾಯ ಮಾಡಿದ ಎಲ್ಲ ಮುಖಂಡರನ್ನು ಸ್ಮರಿಸುತ್ತಾ ಜೀವನದುದ್ದಕ್ಕೂ ನಾನು ಶಿಕ್ಷಕರ ಸಮಸ್ಯೆಗಳಿಗೆ ಸದಾ ಚಿರಋಣಿಯಾಗಿರುತ್ತೇನೆ ಎಂದು ಭರವಸೆ ನೀಡಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಧ್ಯಮಿಕ ಶಾಲಾ ನೌಕರರ ಸಂಘದ ತಾಲೂಕಾ ಘಟಕದಿಂದ ಸಭಾಪತಿ ಬಸವರಾಜ ಹೊರಟ್ಟಿಗೆ ಸನ್ಮಾನಿಸಿ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾಜಿ ಶಾಸಕ ಎನ್.ಎಚ್. ಕೋನರಡ್ಡಿ, ಆರ್.ಎ. ದೇಸಾಯಿ, ಕ್ಷೇತ್ರ ಶಿಕ್ಷಣಾಧಿಕಾರಿ ಬಿ.ಎಸ್. ಮಾಯಾಚಾರ್ಯ, ಜಿ.ಆರ್. ಭಟ್, ವಿ.ಎಸ್. ಹುದ್ದಾರ, ತಾಲೂಕಾ ಘಟಕದ ಅಧ್ಯಕ್ಷ ಸಂತೋಷ ಪಾಟೀಲ, ರವಿಕುಮಾರ ಬೆಳಹಾರ, ಎಮ್.ವ್ಹಿ. ಮುತ್ತಲಗೇರಿ, ಎಂ.ವ್ಹಿ. ಗಾರವಾಡ, ವ್ಹಿ.ಎಂ. ಹಿರೇಮಠ, ಎಂ.ಎನ್. ಚಂದ್ರಣ್ಣವರ, ಎ.ಕೆ. ಜಿಂಜರವಾಡೆ, ಜಿ.ವಿ. ಕೊರವರ, ಎನ್.ಡಿ. ಧಾರವಾಡ, ಯು.ಬಿ.ಬಿಲ್ಲಹದ್ದಣ್ಣವರ ಹಾಗೂ ತಾಲೂಕಿನ ಶಿಕ್ಷಣ ಸಂಸ್ಥೆಯ ಮುಖಂಡರು ಮತ್ತು ಸಿಬ್ಬಂದಿ ವರ್ಗ ಉಪಸ್ಥಿತರಿದ್ದರು.